ಅರ್ಜಿಗಳನ್ನು ಸಲ್ಲಿಸಿ ಗೌರವಧನ ಮಂಜೂರು ಮಾಡಬೇಕೆಂದು ಒತ್ತಾಯಿಸುತ್ತಿದ್ದುದರಿಂದ ಗೋವಾ ವಿಮೋಚನಾ ಚಳುವಳಿಗಾರರಿಗೆ ಗೌರವಧನ ಮಂಜೂರು ಮಾಡುವ ಯೋಜನೆಯನ್ನು 19-4-95 ರಿಂದ ರದ್ದುಗೊಳಿಸಿದೆ.

ಇ) ಇಲ್ಲ.

ವಿಷಯ: ಪುತ್ತೂರು ಗ್ರಾಮಾಂತರ ಪೋಲೀಸ್ ಠಾಣೆ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1627 (1855)

ಶ್ರೀ ಡಿ.ವಿ.ಸದಾನಂದಗೌಡ (ಪುತ್ತೂರು):- ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಕೃತ ಪುತ್ತೂರು ಗ್ರಾಮಾಂತರ ಪೋಲೀಸ್ ಠಾಣೆಯು ಸದ್ರಿ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳ ಒಂದು ಬದಿಯಲ್ಲಿದ್ದು ಇದನ್ನು ಈ ಗ್ರಾಮಗಳ ಕೇಂದ್ರಸ್ಥಾನವಾದ ''ಕುಂಬ್ರ'' ಎಂಬಲ್ಲಿಗೆ ಸ್ಥಳಾಂತರಿಸುವ ಪ್ರಸ್ತಾವನೆ ಸರಕಾರದ ಮುಂದಿದೆಯೇ?

ಆ) ಇದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು):-

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ವಿಷಯ: ತುಂಗಾಭದ್ರ ಅಣೆಕಟ್ಟಿನ ಹೂಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1629 (1812)

ಶ್ರೀ ಸಂಗಣ್ಣ ಕರಡಿ (ಕೊಪ್ಪಳ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಂಗಭದ್ರಾ ಅಣೆಕಟ್ಟಿನಲ್ಲಿ ಶೇಖರಣೆಗೊಂಡಿರುವ ಹೂಳಿನ ಪ್ರಮಾಣ ಎಷ್ಟು?

ಆ) ಈ ಹೂಳನ್ನು ತೆಗೆಯಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಇ) ಈ ಹೂಳನ್ನು ತೆಗೆಯಲು ಖರ್ಚಾಗುವ ಹಣವೆಷ್ಟು?

ಶ್ರೀ ಹೆಚ್.ಡಿ.ದೇವೇಗೌಡ (ಮುಖ್ಯಮಂತ್ರಿಗಳು):-

ಅ) ತುಂಗಭದ್ರಾ ಅಣೆಕಟ್ಟಿನಲ್ಲಿ 1993ರ ಸೆಡಿಮೆಂಟೇಶನ್ ಸರ್ವೆ ಪ್ರಕಾರ ಸುಮಾರು 20.97 ಟಿ.ಎಮ್.ಸಿ.ಯಷ್ಟು ಹೂಳು ತುಂಬಿರುತ್ತದೆ.

ಆ) ಯಾವುದೇ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ.

ಇ) ಸುಮಾರು ರೂ. 2000.00 ಕೋಟಿಗಳೆಂದು ಅಂದಾಜಿಸಲಾಗಿದೆ.

ವಿಷಯ: ಹಿರೇಹಳ್ಳ ನೀರಾವರಿ ಯೋಜನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1630 (1829)

ಶ್ರೀ ಸಂಗಣ್ಣ ಕರಡಿ (ಕೊಪ್ಪಳ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಪ್ಪಳ ತಾಲ್ಲೂಕಿನ ಹಿರೇಹಳ್ಳ ನೀರಾವರಿ ಯೋಜನೆಯ ಮೂಲ ಅಂದಾಜು ಎಷ್ಟು? ಮತ್ತು ಈಗಿನ ಪರಿಷ್ಕೃತ ಅಂದಾಜು ಎಷ್ಟು?

ಆ) ಈ ಯೋಜನೆಯನ್ನು ಪ್ರಾರಂಭಿಸಿದ್ದು ಎಂದು ಮತ್ತು ಈಗ ಇದು ಯಾವ ಹಂತದಲ್ಲಿದೆ?

ಇ) ಈ ಯೋಜನೆಗೆ ಈವರೆಗೆ ಎಷ್ಟು ಹಣ ಖರ್ಚು ಮಾಡಲಾಗಿದೆ ಹಾಗೂ ಯೋಜನೆಯು ಪೂರ್ಣಗೊಳ್ಳಲ್ಲಿಕ್ಕೆ ಇನ್ನು ಎಷ್ಟು ಹಣ ಬೇಕಾಗುವುದು?

ಈ) ಈ ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಹೆಚ್.ಡಿ.ದೇವೇಗೌಡ (ಮುಖ್ಯಮಂತ್ರಿಗಳು):-

ಅ) ಹಿರೇಹಳ್ಳ ಯೋಜನೆಯ ಮೂಲ ಅಂದಾಜು ರೂ.6.35 ಕೋಟಿಗಳು ಹಾಗೂ ಇದರ ಪರಿಷ್ಕೃತ ಅಂದಾಜು ರೂ.90.00 ಕೋಟಿಗಳು.

ಆ) 1977ರಲ್ಲಿ ಈ ಯೋಜನೆಯು ಪ್ರಾರಂಭವಾಯಿತು. ಇದುವರೆಗೆ ಮಣ್ಣಿನ ಏರಿಯ ಬಹುತೇಕ ಕೆಲಸವು ಮುಗಿದಿದ್ದು, ಕೋಡಿಯ ಕಾಂಕ್ರಿಟ್ ಕೆಲಸವು ಪ್ರಗತಿಯಲ್ಲಿರುತ್ತದೆ ಹಾಗೂ ಕಾಲುವೆ ಕೆಲಸಗಳು ಪ್ರಗತಿಯಲ್ಲಿವೆ.

ಈ) 2000 ಇಸವಿಯೊಳಗಾಗಿ ಈ ಯೋಜನೆಯನ್ನು ಪೂರ್ಣಗೊಳಿಸಲು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ವಿಷಯ: ಮಡಿವಾಳದಿಂದ ಗಾರ್ಲೆಬಾವಿ ಪಾಳ್ಯದವರೆಗೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಬೀದಿ ದೀಪದ ಸೌಲಭ್ಯ :

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1631 (1844)

ಶ್ರೀ ಎಂ. ಶ್ರೀನಿವಾಸ (ಉತ್ತರಹಳ್ಳಿ): ಮಾನ್ಯ ಬೆಂಗಳೂರು ನಗರಾಭಿವೃದ್ಧಿ ಹಾಗೂ ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಹೊಸೂರು ರಸ್ತೆ ಮಡಿವಾಳದಿಂದ ಗಾರವೆಭಾವಿ ಪಾಳ್ಯದವರೆಗೆ ಇರುವ ರಾಷ್ಟ್ರೀಯ ಹೆದ್ದಾರಿಯಲ್ಲಿ ಬೀದಿ ದೀಪದ ಸೌಲಭ್ಯ ಇಲ್ಲದೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

2) ಹೊಸೂರು ರಸ್ತೆಯಿಂದ ಬಿ.ಟಿ.ಎಂ. ಬಡಾವಣೆಗೆ ಸೇರುವ ರಿಂಗ್ ರಸ್ತೆಯಲ್ಲಿರುವ ಕೇಂದ್ರ ರೇಷ್ಮೆಮಂಡಳಿ ಹತ್ತಿರ ಒಂದು ಲೈಟ್ ಕಂಬ ಬಾಗಿ ಕೆಳಗೆ ಬೀಳುವ ಸ್ಥಿತಿಯಲ್ಲಿದ್ದು, ಜನರು ದೂರುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

3) ಬಿ.ಟಿ.ಎಂ. ಬಡಾವಣೆ, ಬೈಕೊ ಬಡಾವಣೆ ಜೆ.ಪಿ.ನಗರ, ಬನಶಂಕರಿ 3ನೇ ಹಂತದ ಬಡಾವಣೆಯ ರಿಂಗ್ ರಸ್ತೆಯಲ್ಲಿರುವ ಬಲ್ಬ್‌ಗಳು ಹಾಳಾಗಿದ್ದು ತುಂಬಾ ದಿನಗಳಿಂದ ರಿಪೇರಿ ಮಾಡದೆ ಜನರಿಗೆ ತುಂಬಾ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ. ಬಂದಿದ್ದಲ್ಲಿ ಅದನ್ನು ಸರಿಪಡಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಆರ್.ರೋಷನ್ ಬೇಗ್ (ಬೆಂಗಳೂರು ನಗರಾಭಿವೃದ್ಧಿ ಹಾಗೂ ವಕ್ಫ್ ರಾಜ್ಯ ಸಚಿವರು):-

ಅ) ಇಲ್ಲ. ಇದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಬರುವುದಿಲ್ಲ.

ಆ) ಸೆಂಟ್ರಲ್ ಸಿಲ್ಕ್ ಬೋರ್ಡ್ ಹತ್ತಿರವಿರುವ ದಕ್ಕೆಗೊಂಡಿರುವ ಪಿಮ್ಯೂಲ್ ಕಂಬಗಳ ರಿಪೇರಿ